ಆದರೆ ವೇತನದಲ್ಲಿ ಏನೊಂದೂ ಹೆಚ್ಚದ ಕಾರಣ, ಕೊನೆಯಲ್ಲಿ ಇದೇ ಅವರಿಬ್ಬರ ನಡುವಿನ ಘರ್ಷಣೆಗೆ ಕಾರಣವಾಗಿತ್ತು.

ಇತ್ತ ಸೈಕಲ್ ಪ್ರವಾಸಕ್ಕೆ ಉತ್ಸಾಹದಿಂದ ತಯಾರಾಗುತ್ತಿದ್ದ ಸಮಯದಲ್ಲಿ, ಮನೆಯಲ್ಲಿ ಆದ ಈ ಪಲ್ಲಟಗಳು ಭಾವೇಶ್‌ನನ್ನು ಚಿಂತೆಗೆ ನೂಕಿತು. ತಮ್ಮ ಸೈಕಲ್ ಯಾತ್ರೆಯ ಕನಸು ನನಸಾಗದೆ ಉಳಿದು ಬಿಡುವುದೇನೋ ಅನಿಸಿ ದುಃಖವಾಯಿತು. ಮನೆಯ ಪರಿಸ್ಥಿತಿ ಸಾಕಷ್ಟು ಚಿಂತಾಜನಕವಿತ್ತು. ತಮ್ಮದೆಲ್ಲವನ್ನೂ ಕಾರ್ಖಾನೆಗೆ ಎರೆದು ಆ ಕಂಪನಿಯೊಡನೆ ತಮ್ಮನ್ನು ತಾವು ಸಂಪೂರ್ಣವಾಗಿ ಗುರುತಿಸಿಕೊಂಡಿದ್ದ ತಂದೆಗೆ, ತಮ್ಮವರಿಂದಲೇ ಉಪೇಕ್ಷಿತಗೊಂಡದ್ದು ಭರಿಸಲು ಅಸಾಧ್ಯವಾದ ನೋವಾಗಿತ್ತು. ಅದೆಷ್ಟು ಆಳವಾಗಿ ಅವರನ್ನು ಕಾಡಿತ್ತು ಎಂದರೆ ಅವರ ಮಾನಸಿಕ ಸ್ಥಿತಿ ಕದಡಿ ಸ್ಕಿಜೊಫ್ರೇನಿಯಾಕ್ಕೆ ಒಳಗಾದರು. ಕೆಲಸವಿಲ್ಲದೆ ಖಿನ್ನರಾಗಿ ಕುಳಿತ ಗಂಡನ ಮಾನಸಿಕ ಸ್ಥಿತಿಯ ಬಗ್ಗೆ ತಾಯಿಗೆ ವಿಪರೀತ ಕಳವಳವಾಯಿತು. ಈಗ ತಾಯಿ, ಗಂಡ ಮತ್ತು ಮಗನೊಡನೆ ಗೋಂದಿಯಾದಿಂದ ಬಾಂಬೆಗೆ ಸ್ಥಳಾಂತರಗೊಳ್ಳಲು ನಿರ್ಧರಿಸಿದರು. ಅಲ್ಲಿ ಆಸರೆಯಾಗಿ ತನ್ನ ಕುಟುಂಬವಿದೆ. ಬಾಂಬೆಯಂತಹ ದೊಡ್ಡ ಶಹರಿನಲ್ಲಿ ಗಂಡನಿಗೆ ಏನಾದರೂ ಸೂಕ್ತ ಕೆಲಸ ಸಿಗಬಹುದು ಎಂಬ ಆಸೆಯೂ ಇತ್ತು.

ಜಗತ್ತು ನೋಡುವ ಸಾಹಸಯಾತ್ರೆಯ ಕನಸಿನಲ್ಲಿದ್ದ ಭಾವೇಶ್‌ಗೆ ಇದು ಸವಾಲಿನಂತಹ ಸಂದರ್ಭ. ಬಹಳಷ್ಟು ಯೋಚಿಸಿ ಭಾವೇಶ್ ನಿರ್ಧಾರ ಕೈಗೊಂಡರು. ಭಾವೇಶ್ ಬಹಳ ಸಂಕೋಚದಿಂದಲೇ ಅಮ್ಮನಿಗೆ ಹೇಳಿದರು. ತಮ್ಮ ಈ ವರ್ಷದ ವಿದ್ಯಾಭ್ಯಾಸ ಮುಗಿದ ಮೇಲೆ ಗೋಂದಿಯಾದಲ್ಲಿಯೇ ಉಳಿದು, ಸೈಕಲ್ ಯಾತ್ರೆ ಕೈಗೊಳ್ಳುವ ತಮ್ಮ ಇಚ್ಛೆಯನ್ನು ತಿಳಿಸಿದರು. ತಂದೆಯ ಚಚೇರಿ ಭಾಯಿ ಮಯೂರ್ ಭಾಟಿಯಾ ಗೋಂದಿಯಾದಲ್ಲಿಯೇ ವಾಸಿಸುತ್ತಿದ್ದರು. ಅವರು 'ಅಶೋಕ್ ವಸ್ತ್ರ ಭಂಡಾರ್' ಎಂಬ ಬಲು ದೊಡ್ಡ ಬಟ್ಟೆಯ ಅಂಗಡಿಯ ಮಾಲೀಕರಾಗಿದ್ದರು. ಮಗನ ಕನಸನ್ನು ಅರಿತ ಅಮ್ಮ ಮಯೂರ್ ಭಾಟಿಯಾ ಅವರ ಮನೆಯಲ್ಲಿ ಭಾವೇಶ್ ಇರುವಂತೆ ವ್ಯವಸ್ಥೆ ಮಾಡಿದರು. ತಂದೆಯ ಆರೋಗ್ಯ ಮತ್ತಷ್ಟು ಕೆಟ್ಟ ಕಾರಣ, ತಾಯಿ ಬೇಗನೆ ಬಾಂಬೆಗೆ ಹೋಗಲು ಯೋಚಿಸಿದರು.

ವಸ್ತ್ರಭಂಡಾರದ ಮಾಲೀಕರ ಮನೆಯಲ್ಲಿನ ವಾಸ, ಭಾವೇಶ್‌ಗೆ ಬಟ್ಟೆ ಅಂಗಡಿಯ ಅನುಭವವನ್ನು ತಂದು ಕೊಟ್ಟಿತು. ತನಗೆ ಇರಲು ತಾವು ನೀಡಿ ನೋಡಿಕೊಂಡ ಸಂಬಂಧಿಕರಿಗೆ ಸಹಾಯ ಮಾಡಲು ಭಾವೇಶ್ ಸಮಯ ಒದಗಿದಾಗಲೆಲ್ಲ ಅಂಗಡಿಯಲ್ಲಿ ಹೋಗಿ ಕೂಡುತ್ತಿದ್ದರು. ಬಟ್ಟೆಯನ್ನು ಸರಿಯಾಗಿ ಅಳತೆ ಮಾಡುವುದು, ಬರುವ ಗ್ರಾಹಕರಿಗೆ ಆತಿಥ್ಯ ನೀಡುವುದು, ಅವರನ್ನು ಸ್ವಾಗತಿಸಿ, ಅವರೊಡನೆ ಮಧುರವಾಗಿ ನುಡಿಯುವುದು ಅವರಿಗೆ ಕರಗತವಾಯಿತು. ಅಷ್ಟೇ ಅಲ್ಲದೆ ಸಾಲದ ಮೇಲೆ ಜವಳಿ ಕೊಂಡು ಹೋದವರಿಂದ ಹಣ ಪಡೆಯಲು



ಕೂಡಾ ಹೋಗುವರು. ಇಂತೆಲ್ಲ ಸಂದರ್ಭಗಳಲ್ಲಿ ತಮ್ಮ ಮಾತು ಮತ್ತು ವ್ಯವಹಾರದ ಚಾತುರ್ಯದಿಂದ ಕೆಲಸ ಆಗ ಮಾಡುವ ಕಲೆಯನ್ನು ಕಲಿತರು. ಒಂದು ಉದ್ಯಮಕ್ಕೆ ಗ್ರಾಹಕರೊಡನೆಯ ಸಂಬಂಧ ಎಷ್ಟು ಮುಖ್ಯ ಎಂದು ಸ್ವಾನುಭವದಲ್ಲಿ ಅರಿತರು. ಗ್ರಾಹಕರೊಡನೆ ಬದುಕಿನುದ್ದದ ಸ್ನೇಹ ಸಂಬಂಧವನ್ನು ಬೆಳೆಸಿಕೊಳ್ಳುವುದು ಸಾಧ್ಯ ಎಂದೂ ತಿಳಿದರು. ಅಮ್ಮ ಅಪ್ಪನಿಂದ ದೂರವಾಗಿ ಸಂಬಂಧಿಕರ ಮನೆಯಲ್ಲಿ ಉಳಿಯಬೇಕಾದ ತಮ್ಮ ಪರಿಸ್ಥಿತಿಗೆ ಮರುಗಲಿಲ್ಲ. ಅನಿವಾರ್ಯವಾದರೂ, ಅದು ಅವರದೇ ಆಯ್ಕೆಯಾಗಿತ್ತು. ಪ್ರತಿಯೊಂದು ಕಷ್ಟದ ಪರಿಸ್ಥಿತಿಯನ್ನೂ ಬದುಕು ತಮ್ಮೆದುರು ತೆರೆದ ಮತ್ತೊಂದು ಕಲಿಕೆಯ ಅವಕಾಶ ಎಂದು ಭಾವಿಸಿ, ಅದೆಷ್ಟೇ ಸಣ್ಣ ಕೆಲಸವಾಗಲಿ ಪೂರ್ಣ ಶ್ರದ್ಧೆಯಿಂದ ತೊಡಗಿದರು. ಜೀವನ ಪಾಠಶಾಲೆಯಲ್ಲಿ ಕಲಿಯುತ್ತಲೇ ಹೋದರು. ಸದ್ಯಕ್ಕೆ ಬಟ್ಟೆ ಅಂಗಡಿ, ಅವರ ಕಲಿಕೆಯ ತಾಣವಾಗಿತ್ತು.

ಮಯೂರ್‌ಜಿ ಅವರಿಗೆ ಗೋಂದಿಯಾದಲ್ಲಿ ಒಳ್ಳೆಯ ಸಂಪರ್ಕವಿತ್ತು, ಬಹಳಷ್ಟು ಜನರ ಪರಿಚಯವಿತ್ತು. ಭಾವೇಶ್ ತಮ್ಮ ಸೈಕಲ್ ಯಾತ್ರೆಯ ವಿಚಾರವನ್ನು ಅವರಿಗೆ ತಿಳಿಸಿದಾಗ, ಗ್ರಾಮದ ಸಾಕಷ್ಟು ಜನರಿಗೆ ಅವರು ಭಾವೇಶನನ್ನು ಪರಿಚಯಿಸಿದರು. ಪರಿಚಿತರಾದ ಆ ಒಬ್ಬೊಬ್ಬರಿಂದಲೂ ಭಾವೇಶ್‌ಗೆ ಬಗೆ ಬಗೆಯ ಸಹಾಯ ದೊರೆಯಲಿತ್ತು.

ತಮ್ಮ ಸೈಕಲ್ ಯಾತ್ರೆಯಲ್ಲಿ 'ವೇಗವಾಗಿ ಹೋಗುವುದು, ದಿನವೊಂದಕ್ಕೆ ಹೆಚ್ಚಿನ ದೂರವನ್ನು ಕ್ರಮಿಸುವುದು ಮುಖ್ಯ' ಎಂದು ಅರಿತಿದ್ದರು. ಹಾಗೆಂದೇ ಭಾವೇಶ್ ಮತ್ತು ಗೆಳೆಯರು, ಸಾಧಾರಣ ಸೈಕಲ್‌ಗೆ ಬದಲು ಒಂದು ರೇಸ್ ಸೈಕಲ್ ಬಳಸಲು ನಿರ್ಧರಿಸಿದರು. ಸೈಕಲ್ ಅಂಗಡಿಯಿದ್ದ ಸ್ನೇಹಿತ ಹೊಸದಾಗಿ ಬಂದ ಬಿ.ಎಸ್.ಎ. ಸೈಕಲ್ ಕೊಳ್ಳಲು ಹೇಳಿದ. ಸಾಧಾರಣ ಸೈಕಲ್‌ಗಳ ಟಯರ್‌ನ ವ್ಯಾಸ 22ರಿಂದ 24 ಅಂಗುಲ ಇರುತ್ತದೆ. ಆದರೆ ಈ ಸೈಕಲ್‌ನ ಟಯರ್ ವ್ಯಾಸ 26 ಅಂಗುಲವಿತ್ತು. ಹಾಗೆಯೇ ಟಯರ್ ಸ್ವಲ್ಪ ತೆಳುವಾಗಿಯೂ ಇತ್ತು. ಈ ಸೈಕಲ್ ಹೆಚ್ಚು ತೂಕವನ್ನು ಹೊರಬಲ್ಲದಾಗಿತ್ತು. ಸೈಕಲ್ ಎತ್ತರ ಕೂಡ ಹೆಚ್ಚಿತ್ತು. ಭಾವೇಶ್ ಮತ್ತು ದಿನೇಶ್ ಇಬ್ಬರೂ ಎತ್ತರದ ಯುವಕರು. ಹಾಗಾಗಿ ಇದು ಅವರಿಗೆ ಅನುಕೂಲವಾಗಿ ಕಂಡಿತು. ಕೊನೆಗೆ ಇಂತಹ ಎರಡು ಸೈಕಲ್‌ಗಳನ್ನು ಕೊಳ್ಳಲು ನಿರ್ಧರಿಸಿದರು. ಅವುಗಳಿಗೆ ಹೀರೊ ಕಂಪನಿಯ 10 ಗೆಯರ್ ಹಾಕಿಸಬೇಕಿತ್ತು. ಜೊತೆಗೆ ಒಂದು ಸೈಕಲ್‌ನ ಹಿಂಬದಿಯಲ್ಲಿ ಒಂದು ಜೊತೆ ಅಧಿಕ ಪೆಡಲ್ ಜೋಡಿಸಬೇಕಿತ್ತು.

ನೋಡ ನೋಡುತ್ತಿದ್ದಂತೆ ಪ್ರವಾಸದ ಯೋಜನೆ ಪೂರ್ಣಗೊಂಡಿತ್ತು. ಸೈಕಲ್ ಅಂಗಡಿಯವನಿಗೆ ಈ ಎಲ್ಲ ಪರಿವರ್ತನೆಗಳನ್ನು ಮಾಡಲು ಹೆಚ್ಚಿನ ಹಣ ನೀಡುವುದಾಗಿ ಹೇಳಿದರು. ಆತನ ಕರ್ಮಚಾರಿಗಳು ಈಗ ಈ ವಿಶೇಷ ಸೈಕಲ್ ತಯಾರಿಕೆಯ ಕೆಲಸದಲ್ಲಿ ಮುಳುಗಿದರು. ಈ ಸೈಕಲ್‌ಗಳಿಗೆ ಏನಿಲ್ಲೆಂದರೂ 20,000 ರೂಪಾಯಿಗಳು ಬೇಕಿದ್ದವು. ಇಷ್ಟಲ್ಲದೆ, ಪ್ರವಾಸದ ಸಮಯದಲ್ಲಿ ಹಾಕಿಕೊಳ್ಳಲು ಬೇಕಾದ ಬಟ್ಟೆ, ಬೂಟುಗಳು, ರಸ್ತೆಯ ಉದ್ದಕ್ಕೂ ಊಟದ ಖರ್ಚು, ಸೈಕಲ್ ಕೆಟ್ಟು ಕುಳಿತರೆ ಅದರ ರಿಪೇರಿಗೆ ಹಣ, ಆಕಸ್ಮಿಕಗಳೇನಾದರೂ ಜರುಗಿದರೆ ಆಪತ್ಕಾಲಕ್ಕೆ ಒಂದಿಷ್ಟು ಹಣ – ಇವೆಲ್ಲವನ್ನು ಕೂಡಿಸಿ ನೋಡಿದಾಗ ಅವರಿಗೆ ಸುಮಾರು 25,000 ರೂಪಾಯಿಗಳು ಬೇಕಿದ್ದಿತು. ಈ ಮೂವರು ಯುವಕರಲ್ಲಿ ಯಾರ ಬಳಿಯೂ ಅಷ್ಟು ಹಣ ಇರಲಿಲ್ಲ. ಈಗ ತಮ್ಮ ಯೋಜನೆಗೆ ಬೇಕಾದ ಹಣವನ್ನು ಸಂಗ್ರಹಿಸುವುದು ಅವರ ಮುಂದಿದ್ದ ಸವಾಲು.

ಆ ದಿನಗಳಲ್ಲಿ ಸಂಜಯ್ ನಾಯಕ್ ಎಂಬಾತ ಅವರ ಕಾಲೇಜಿನ ಜನರಲ್ ಸೆಕ್ರೆಟರಿ ಆಗಿದ್ದರು. ಆತ ಭಾವೇಶ್‌ಗಿಂತ ಮೂರು ವರ್ಷಕ್ಕೆ ಹಿರಿಯರಿದ್ದರು. ಮೊದಲಿಗೆ ಆತನ ಬಳಿಗೆ ಹೋಗಿ ತಮ್ಮ ಯೋಜನೆಯನ್ನು, ಹಣದ ಸಮಸ್ಯೆಯನ್ನು ಹೇಳಿಕೊಂಡರು. ಈ ಸೈಕಲ್ ಯಾತ್ರೆಯಿಂದ ಕಾಲೇಜಿನ ಹೆಸರೂ ಪ್ರಸಿದ್ಧವಾಗುತ್ತದೆ ಎಂದು ತಿಳಿಸಿ ಹೇಳಿದರು. ಆತನಿಗೆ ಸಾಕಷ್ಟು ಜನರ ಪರಿಚಯವಿತ್ತು. ಆತ ಯೋಚಿಸಿ, ಸೈಕಲ್ ಯಾತ್ರೆಗೆ 'ರಾಷ್ಟ್ರೀಯ ಏಕಾತ್ಮಕತಾ ಯಾತ್ರೆ' ಎಂದು ಹೆಸರು ಕೊಟ್ಟರು. ಆತನ ಸ್ನೇಹಿತನ ಮುದ್ರಣಾಲಯಕ್ಕೆ ಕರೆದೊಯ್ದು ಒಂದೇ ರಾತ್ರಿಯಲ್ಲಿ 3000 'ಡೊನೇಶನ್ ಕಾರ್ಡ್'ಗಳನ್ನು ಮುದ್ರಿಸಿ ತಂದರು. ಒಂದೊಂದು ಕಾರ್ಡೂ 10 ರೂಪಾಯಿ ಮೌಲ್ಯದ್ದು. ಮರುದಿನ ಸಂಜಯ್, ಭಾವೇಶ್ ಮತ್ತು ಗೆಳೆಯರನ್ನು ಪ್ರತಿ ಕಕ್ಷೆಗೂ ಕರೆದೊಯ್ದರು. ಅವರ ಸೈಕಲ್ ಯಾತ್ರೆಯ ಬಗ್ಗೆ ವಿವರಿಸಿ ಹೇಳಿದರು. ಅಲ್ಲಿಯ ವಿದ್ಯಾರ್ಥಿಗಳಿಗೆ ಕೊನೇ ಪಕ್ಷ ಒಂದಾದರೂ ಕಾರ್ಡ್ ಕೊಳ್ಳುವಂತೆ ಪ್ರೇರೇಪಿಸಿದರು. ವಿದ್ಯಾರ್ಥಿಗಳು ಉತ್ಸಾಹದಿಂದ ಚೀಟಿಗಳನ್ನು ಕೊಂಡುಕೊಂಡರು. ಕೇವಲ ಹತ್ತು ರೂಪಾಯಿಯ ಮೌಲ್ಯದ ಕಾರ್ಡ್ ಮಾಡಿಸಿದ ಕಾರಣ, ಎಲ್ಲರಿಗೂ ಕೊಳ್ಳಲು ಸಾಧ್ಯವಿತ್ತು. ಅವರ ಸೈಕಲ್ ಯಾತ್ರೆಗೆ ಬೇಕಾದ ಮೊತ್ತ ಮೆಲ್ಲನೆ ಸೇರತೊಡಗಿತ್ತು.

(ಸಶೇಷ)